# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1003 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 17.12.2024 |
| ಉತ್ತರಿಸುವಸಚಿವರು | : | ಪೌರಾಡಳಿತ ಮತ್ತು ಹಜ್ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಪೌರಾಡಳಿತಗಳ ಅಧೀನದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ತರಕಾರಿ ಹೂ ಹಾಗೂ ಮೀನು ಮಾರುಕಟ್ಟೆಗಳು, ವಾಣಿಜ್ಯ ಸಂಕೀರ್ಣಗಳು, ಬಸ್ಸು ನಿಲ್ದಾಣಗಳು, ಸಾರ್ವಜನಿಕ ಶೌಚಾಲಯಗಳು, ಆಟೋ ಹಾಗೂ ಇತರ ವಾಹನ ನಿಲ್ದಾಣಗಳು, ಸಾರ್ವಜನಿಕ ವಾಹನಗಳ ನಿಲ್ದಾಣಗಳು ಇತ್ಯಾದಿ ಮೂಲಸೌಲಭ್ಯಗಳ ಅಭಿವೃದ್ಧಿಗೆ ಏನು ಕ್ರಮವಹಿಸಲಾಗಿದೆ: | **ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಹಂತ-4) ರ ಯೋಜನೆ:**<br>• ರಾಜ್ಯದ 302 ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಹಂತ-4) ರ ಯೋಜನೆಯಡಿ ರೂ.465.76 ಲಕ್ಷಗಳ ಮೊತ್ತದ 08 ತರಕಾರಿ ಹೂ ಮಾರುಕಟ್ಟೆಗಳನ್ನು, ರೂ.115.94 ಲಕ್ಷಗಳ ಮೊತ್ತದ 03 ಮೀನು ಮಾರುಕಟ್ಟೆಗಳನ್ನು ರೂ.3157.86 ಲಕ್ಷಗಳ ಮೊತ್ತದ 90 ವಾಣಿಜ್ಯ ಸಂಕೀರ್ಣಗಳನ್ನು, ರೂ.1592.37 ಲಕ್ಷಗಳ ಮೊತ್ತದ 25 ಬಸ್ಸು ನಿಲ್ದಾಣಗಳನ್ನು ರೂ. 2732.44 ಲಕ್ಷಗಳ ಮೊತ್ತದ 199 ಸಾರ್ವಜನಿಕ ಶೌಚಾಲಯಗಳನ್ನು, ರೂ.15.00 ಲಕ್ಷಗಳ ಮೊತ್ತದ 01 ಆಟೋ ಹಾಗು ಇತರೆ ವಾಹನ ನಿಲ್ದಾಣಗಳನ್ನು, ರೂ.65.77 ಲಕ್ಷಗಳ ಮೊತ್ತದ 09 ಸಾರ್ವಜನಿಕ ವಾಹನ ನಿಲ್ದಾಣಗಳ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಲಾಗಿರುತ್ತದೆ<br>**ಉದ್ಯಮ ನಿಧಿ:**<br>• ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ವಾಣಿಜ್ಯ ಸ್ವರೂಪದ ಎಲ್ಲಾ ಚಟುವಟಿಕೆಗಳಿಂದ ಬರುವ ಆದಾಯವನ್ನು ಉದ್ಯಮನಿಧಿಯಿಂದ ಪ್ರತ್ಯೇಕವಾಗಿ ಸಂಗ್ರಹಿಸಲಾಗುತ್ತದೆ. ಸದರಿ ಮೊತ್ತವನ್ನು ಅಭಿವೃದ್ಧಿ ಕಾಮಗಾರಿಗಳಾದ ಹೊಸ ವಾಣಿಜ್ಯ ಸಂಕೀರ್ಣಗಳು ಬಸ್ ನಿಲ್ದಾಣದ ಮೇಲೆ ವಾಣಿಜ್ಯ ಸಂಕೀರ್ಣ, ಉದ್ಯಾನವನ, ಆಟದ ಮೈದಾನ, Pay and use ಶೌಚಾಲಯ ನಿರ್ಮಾಣಕ್ಕೆ ಸುತ್ತೋಲೆ ಸಂ:ನಅಇ 301 ಜಿಇಎಲ್ 2017, ದಿ:19-07-2019ರನ್ವಯ ಬಳಸಲಾಗುತ್ತಿದೆ. |
| (ಆ) | ದಕ್ಷಿಣ ಕನ್ನಡ ಉಡುಪಿ ಜಿಲ್ಲೆಗಳ ಪೌರಾಡಳಿತ ಸಂಸ್ಥೆಗಳ ವ್ಯಾಪ್ತಿಯಲ್ಲಿ ಮೀನು ಮತ್ತು ಮಾಂಸ ಮಾರುಕಟ್ಟೆಗಳನ್ನು ಸಮರ್ಪಕವಾಗಿ ನಿರ್ವಹಿಸಲು ಯಾವಾಗ ಕ್ರಮವಹಿಸಲಾಗುತ್ತಿದೆ; | ದಕ್ಷಿಣ ಕನ್ನಡ ಜಿಲ್ಲೆ ಹಾಗು ಉಡುಪಿ ಜಿಲ್ಲೆಗಳಲ್ಲಿ ಸರ್ಕಾರದ ಉದ್ಯಮ ನಿಧಿ ಹಾಗೂ ಸಾಮಾನ್ಯ ನಿಧಿಯಡಿಬಿಡ್ದಾರರ ಮೂಲಕ ನಿಯಮಾನುಸಾರ ವಾರ್ಷಿಕವಾಗಿ ಮೀನು ಮತ್ತು ಮಾಂಸ ಮಾರುಕಟ್ಟೆಗಳ ಸಮರ್ಪಕ ನಿರ್ವಹಣೆಯನ್ನು ಕೈಗೊಳ್ಳಲಾಗುತ್ತಿದೆ. |

Scanned with OKEN Scanner

<table>
<tr>
<td>(ಇ)</td>
<td>ದಕ್ಷಿಣ ಕನ್ನಡ ಉಡುಪಿ ಜಿಲ್ಲೆಗಳ ವ್ಯಾಪ್ತಿಯಲ್ಲಿ ಇರುವ ಪೌರಾಡಳಿತ ಸಂಸ್ಥೆಗಳ ವ್ಯಾಪ್ತಿಯಲ್ಲಿ ಈ ಎಲ್ಲಾ ಮೂಲಸೌಲಭ್ಯಗಳ ಅಭಿವೃದ್ಧಿಗೆ ಯಾವುದಾದರೂ ಸಮಗ್ರ ಯೋಜನೆ ರೂಪಿಸಲಾಗಿದೆ: (ವಿವರ ನೀಡುವುದು);</td>
<td>ಎಸ್.ಎಫ್.ಸಿ ಯೋಜನೆ:<br>
• ದಕ್ಷಿಣ ಕನ್ನಡ ಉಡುಪಿ ಜಿಲ್ಲೆಗಳ ವ್ಯಾಪ್ತಿಯಲ್ಲಿನ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಮೂಲ ಸೌಲಭ್ಯಗಳನ್ನು ಅಭಿವೃದ್ಧಿಗೊಳಿಸಲು ಈ ಕೆಳಕಂಡ ಯೋಜನೆಗಳಲ್ಲಿ ಅನುದಾನವನ್ನು ಒದಗಿಸಿ ಕ್ರಮವಹಿಸಲಾಗುತ್ತದೆ.<br>
1. ಎಸ್.ಎಫ್.ಸಿ ಮುಕ್ತ ನಿಧಿ ಅನುದಾನ: ಈ ಅನುದಾನವನ್ನು 4ನೇ ರಾಜ್ಯ ಹಣಕಾಸು ಆಯೋಗವು ನೀಡಿರುವ ಶಿಫಾರಸ್ಸುಗಳನ್ವಯ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಿಗೆ ಈ ಕೆಳಕಂಡ ಅಂಶಗಳನ್ನು ಪರಿಗಣಿಸಿ, ಹಂಚಿಕೆ ಮಾಡಿ ಅನುದಾನವನ್ನು ಬಿಡುಗಡೆ ಮಾಡಲಾಗುತ್ತದೆ.
<table>
<tr><td>ಜನಸಂಖ್ಯೆ</td><td>-</td><td>40%</td></tr>
<tr><td>ಭೌಗೋಳಿಕ ವಿಸ್ತೀರ್ಣ</td><td>-</td><td>20%</td></tr>
<tr><td>ಪ.ಜಾತಿ/ ಪ.ಪಂಗಡ ಜನಸಂಖ್ಯೆ</td><td>-</td><td>20%</td></tr>
<tr><td>ಅನಕ್ಷರಸ್ಥರು</td><td>-</td><td>20%</td></tr>
<tr><td>ಒಟ್ಟು</td><td>-</td><td>100%</td></tr>
</table>
• ಸರ್ಕಾರವು ಪ್ರತಿ ವರ್ಷ ಆಯವ್ಯಯದಲ್ಲಿ ಎಸ್.ಎಫ್.ಸಿ. ಮುಕ್ತನಿಧಿ ಯೋಜನೆಯ ಬಂಡವಾಳ ಆಸ್ತಿಗಳ ಸೃಜನೆ, ಎಸ್.ಸಿ.ಎಸ್.ಪಿ./ ಟಿ.ಎಸ್.ಪಿ. ಉಪಘಟಕ ಯೋಜನೆಗಳಡಿಯಲ್ಲಿ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಿಗೆ ಅನುದಾನವನ್ನು ಹಂಚಿಕೆ ಮಾಡಿ ಬಿಡುಗಡೆ ಮಾಡಲಾಗುತ್ತದೆ.<br>
2. ಎಸ್.ಎಫ್.ಸಿ ಕುಡಿಯುವ ನೀರು ಅನುದಾನ: ಈ ಅನುದಾನವನ್ನು ಸರ್ಕಾರವು ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕಾಗಿ ಎಸ್.ಎಫ್.ಸಿ ಪ್ರವೇಶ ತೆರಿಗೆ ಅವತರಣದಡಿ ಅನುದಾನವನ್ನು ಪ್ರತಿ ವರ್ಷ ಹಂಚಿಕೆ ಮಾಡಿ ಬಿಡುಗಡೆ ಮಾಡಲಾಗುತ್ತಿದೆ.<br>
3. ಎಸ್.ಎಫ್.ಸಿ ವಿಶೇಷ ಅನುದಾನ: ಈ ಅನುದಾನವನ್ನು ಮಾನ್ಯ ಮುಖ್ಯಮಂತ್ರಿಗಳ ವಿವೇಚನಾನುಸಾರ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ನಗರ ಸ್ಥಳೀಯ ಸಂಸ್ಥೆಗಳಿಗೆ ಮಂಜೂರು ಮಾಡಿ ಬಿಡುಗಡೆಗೊಳಿಸಲಾಗುತ್ತದೆ.</td>
</tr>
<tr>
<td>(ಈ)</td>
<td>ದಕ್ಷಿಣ ಕನ್ನಡ ಉಡುಪಿ ಜಿಲ್ಲೆಗಳ ವ್ಯಾಪ್ತಿಯಲ್ಲಿ ಇರುವ ಪೌರಾಡಳಿತ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕಳೆದ ಮಳೆಗಾಲದ ಅವಧಿಯಲ್ಲಿ ಮರಗಳು ರಸ್ತೆಗೆ ಬಿದ್ದು ಅವಘಡಗಳು ಸಂಭವಿಸಿರುವ ಹಿನ್ನಲೆಯಲ್ಲಿ ರಸ್ತೆ ಬದಿಯಲ್ಲಿ ಇರುವ ಅಪಾಯಕಾರಿ ಮರ ಕಟ್ಟಡ ಇತ್ಯಾದಿಗಳನ್ನು ತೆರವು ಮಾಡಲು ಕ್ರಮವಹಿಸಲಾಗಿದೆಯೇ?</td>
<td>ದಕ್ಷಿಣ ಕನ್ನಡ ಉಡುಪಿ ಜಿಲ್ಲೆಗಳ ವ್ಯಾಪ್ತಿಯಲ್ಲಿನ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಳೆದ ಮಳೆಗಾಲದ ಅವಧಿಯಲ್ಲಿ ಮರಗಳು ರಸ್ತೆಗೆ ಬಿದ್ದು ಅವಘಡಗಳು ಸಂಭವಿಸಿರುವ ಹಿನ್ನಲೆಯಲ್ಲಿ ರಸ್ತೆ ಬದಿಯಲ್ಲಿ ಇರುವ ಅಪಾಯಕಾರಿ ಮರ ಕಟ್ಟಡ ಇತ್ಯಾದಿಗಳನ್ನು ಅರಣ್ಯ ಇಲಾಖೆ ವತಿಯಿಂದ ಹಾಗು ನಗರ ಸ್ಥಳೀಯ ಸಂಸ್ಥೆಗಳ ವತಿಯಿಂದ ಕಾಲಕಾಲಕ್ಕೆ ತೆರವುಗೊಳಿಸಲು ಈಗಾಗಲೇ ಕ್ರಮವಹಿಸಲಾಗಿದೆ.</td>
</tr>
</table>

**ಕಡತ ಸಂಖ್ಯೆ: ನಅಇ 183 ಸಮಸ 2024**

(ರಹೀಂ ಖಾನ್)

ಪೌರಾಡಳಿತ ಹಾಗೂ ಹಜ್ ಸಚಿವರು